

# ಸ್ವಂತ ಉದ್ಯಮದ ಯೋಜನೆ ಇದೆ

## ಸುಜಯ್ ಹೆಗಡೆ
## ಉದಯದ ‘ಮನಸಾರೆ’ಯ ಯುವ

**◆ ನೀವು ಬೆಂಗಳೂರಿಗರು ಆಗಿದ್ದು ಹೇಗೆ?**

ಮೂಲತಃ ಶಿರಸಿ ನಮ್ಮ ಊರು. ನನ್ನ ಬಾಲ್ಯವನ್ನು ಅಲ್ಲೇ ಕಳೆದೆ. ಪೋಷಕರು ಬೆಂಗಳೂರಿಗೆ ನೆಲೆಯನ್ನು ಬದಲಿಸಿದ್ದರಿಂದ ಬೆಂಗಳೂರಿಗನಾದೆ. ನಮ್ಮದು ಚಿಕ್ಕ ಕುಟುಂಬ, ನಾನೊಬ್ಬನೇ ಮಗ. ಬಿಬಿಎಂ ಮಾಡಿದ ನಂತರ ನಟನೆಯನ್ನು ಆರಂಭಿಸಿದೆ. 2014ರಲ್ಲಿ ಪ್ರಸಾರವಾದ ‘ಆಕಾಶದೀಪ’ ಮೊದಲ ಧಾರಾವಾಹಿ. ಅದಾದ ಮೇಲೆ ‘ಮಾಣಿಕ್ಯ’ ಸಿನಿಮಾದಲ್ಲಿ ನಟಿಸಿದೆ. ಇದೇ ಅಭಿನಯದ ವೃತ್ತಿ ಬದುಕಿಗೆ ನಾಂದಿಯಾಯಿತು. ಇದು ಹೇಗಾಯಿತು ಎನ್ನುವುದು ನಿಗೂಢ. ಒಂದು ರೀತಿಯಲ್ಲಿ ಬಯಸದೇ ಬಂದ ಭಾಗ್ಯ.

**◆ ಮನಸಾರೆಯ ಕಥೆಯ ಕೇಂದ್ರ ಏನು?**

ಪ್ರೇಮ ಪ್ರಕರಣದ ಜಾಡಿನಲ್ಲಿಯೇ ಕಥೆ ಸಾಗುತ್ತದೆ. ನಾಯಕ ಹುಡುಗಿಯನ್ನು ಪಡೆಯಲು ಯಾವ ಹಂತವನ್ನಾದರೂ ತಲುಪುತ್ತಾನೆ ಎನ್ನುವುದೇ ಇದರ ಹೂರಣ. ಇಲ್ಲಿ ಸಂಬಂಧದ ಮಹತ್ವವನ್ನು ನಿರೂಪಿಸಲಾಗುತ್ತಿದೆ. ಹುಡುಗ ಅನುಕೂಲಸ್ಥರ ಕುಟುಂಬದಲ್ಲಿ ಹುಟ್ಟಿರುತ್ತಾನೆ. ಆದರೆ, ತಾನು ಪ್ರೀತಿಸುವ ಹುಡುಗಿಯ ಮನೆಯ ಕಾರು ಚಾಲಕನಾಗಿ ದಯನೀಯ ಸ್ಥಿತಿಯಲ್ಲಿ ಕೆಲಸ ಮಾಡುತ್ತಾನೆ. ಅಂದರೆ ಹುಡುಗಿ ತನ್ನ ತಂದೆಯ ಸಂಬಂಧಕ್ಕೆ ನೀಡುವ ಮೌಲ್ಯ ಕಾರಣ. ಇಲ್ಲಿ ಎಲ್ಲ ರೀತಿಯ ಕೌಟುಂಬಿಕ ಬಂಧುತ್ವದೊಳಗಿನ ಪ್ರೀತಿಯ ಸೆಲೆಯನ್ನು ಗುರುತಿಸಲಾಗಿದೆ. ಯುವನಿಗೆ ನಾಯಕಿಯ ಮೇಲೆ ಪ್ರೀತಿ ಹುಟ್ಟುತ್ತದೆ. ಆಕೆ ತನ್ನ ಅಪ್ಪ ಹೇಳಿದ ಹುಡುಗನನ್ನೇ ಮದುವೆ ಆಗಬೇಕು ಎನ್ನುವ ಮನಃಸ್ಥಿತಿಯನ್ನು ತೋರುತ್ತಾಳೆ. ಯುವ ತನ್ನ ಕೋರಿಕೆಯನ್ನು ಒಪ್ಪಲು ಬೇಡುತ್ತಾನೆ. ಆದರೆ, ಅವಳಿಗೆ ಆಸಕ್ತಿ ಮೂಡುವುದೇ ಇಲ್ಲ. ಒತ್ತಾಯಕ್ಕೆ ತಂದೆಯನ್ನು ಒಪ್ಪಿಸಿದರೆ ಮಾತ್ರ ಎನ್ನುವ ಷರತ್ತು ಹಾಕುತ್ತಾಳೇ. ಅವಳೇ ತನ್ನ ಜೀವನ ಸಂಗಾತಿ ಆಗಬೇಕು ಎನ್ನುವ ನಿರ್ಧಾರವನ್ನು ಯುವ ಮಾಡಿರುತ್ತಾನೆ. ಹಾಗಾಗಿ ಅವಳ ಮನಸ್ಸನ್ನು ಗೆಲ್ಲಲು ಅವಳ ಮನೆಯ ಸೇವಕನಾಗುತ್ತಾನೆ. ಅವನು ಏನೇ ಮಾಡಿದರೂ ಮನಸಾರೆ ಮಾಡುತ್ತಾನೆ ಎನ್ನುವುದನ್ನು ಮನಗಂಡ ಆಕೆ ಇಷ್ಟಪಡ್ತಾಳೆ.

**◆ ಇವತ್ತಿನ ನಿಮ್ಮ ಸಾವಲುಗಳನ್ನು ಆರು ವರ್ಷದ ಹಿಂದಿನ ಸವಾಲಿಗೆ ಹೋಲಿಸಿದರೆ...**

ಅಭಿನಯ ರಂಗಕ್ಕೆ ನಟನೆಯನ್ನು ಕಲಿತು ಬಂದವನಲ್ಲ. ನಮ್ಮ ಕುಟುಂಬ ವರ್ಗದಲ್ಲಿಯೂ ನಟನೆಯನ್ನು ಬಲ್ಲವರು ಯಾರೂ ಇಲ್ಲ. ಸಿನಿಮಾದಲ್ಲಿ ನಟಿಸಬೇಕು ಎನ್ನುವ ಸಣ್ಣ ಆಸೆಯಿತ್ತು. ನೋಡೋಣ ಎಂದು ಬಂದವನು ನಾನು. ಮೊದಲು ನನಗೆ ಏನೂ ಗೊತ್ತಿರಲ್ಲ. ಮೊದಲೆಲ್ಲ ತುಂಬ ಬೈಯಿಸಿಕೊಂಡಿದ್ದೇನೆ. ನನಗೆ ಡೈಲಾಗ್‌ಗಳು ನೆನಪೇ ಇರುತ್ತಿರಲಿಲ್ಲ. ಕೆಲವೊಮ್ಮೆ ಕ್ಯಾಮೆರಾ ಎದುರು ಪಾತ್ರವನ್ನೇ ಮರೆತು ಬಿಡ್ತಿದ್ದೆ. ಆಗ ನಿರ್ದೇಶಕ ಕೇಬಲ್ ಶ್ರೀನಿವಾಸ್ ‘ನೀನು ಫೋಟೊ ಜನಿಕ್ ಇದ್ದೀಯಾ, ತಲ್ಲೀನನಾಗುವುದನ್ನು ಕಲಿ’ ಎನ್ನುತ್ತಿದ್ದರು. ಅದನ್ನು ಅವರು ಹೇಳಿ ಕಲಿಸಿದರು. ಕ್ರಮೇಣ ಕಲಿಯುತ್ತಾ ಬಂದಿದ್ದೇನೆ. ಅವತ್ತು ಅಷ್ಟೇ, ಇವತ್ತೂ ಅಷ್ಟೇ ನನ್ನ ಸೀನ್ ಮುಗಿದ ನಂತರ ನಿರ್ದೇಶಕರ ಪಕ್ಕದಲ್ಲಿಯೇ ಕೂರುತ್ತೇನೆ. ತಂಡದ ಎಲ್ಲರ ಜೊತೆ ಚರ್ಚಿಸುತ್ತಾ ಅಭಿನಯವನ್ನು ಸುಧಾರಿಸಿಕೊಳ್ಳುತ್ತಾ ಬಂದಿದ್ದೇನೆ. ‘ಶನಿ’ ಆದ ಮೇಲೆ ಒಂದೂವರೆ ವರ್ಷ ಮನೆಯಲ್ಲೇ ಇದ್ದೆ. ಅವಕಾಶ ಬಂದರೂ ಒಪ್ಪಿಕೊಂಡಿರಲಿಲ್ಲ. ಆ ಬಿಡುವಿನ ವೇಳೆ ಹೆಚ್ಚು ಪಕ್ವವಾದೆ. ಹಿಂಜರಿಕೆಯನ್ನು ಗೆದ್ದೆ. ಈಗ ಎಲ್ಲ ಗೊತ್ತು ಎಂದು ಹೇಳಲಾರೆ ಸ್ವಲ್ಪವಾದರೂ ಕಲಿತಿದ್ದೇನೆ ಎನ್ನುವ ವಿಶ್ವಾಸ ಇದೆ.

**◆ ನಿಮ್ಮ ಮುಂದಿನ ಹೆಜ್ಜೆಗಳು ಹೇಗಿರುತ್ತವೆ?**

ಪೋಸ್ಟ್ ಸ್ಟ್ಯಾಂಪ್, ದೇಶ– ವಿದೇಶಗಳ ನಾಣ್ಯ ಸಂಗ್ರಹಿಸುವ ಹವ್ಯಾಸ ನನಗೆ ಇತ್ತು. ಆಕಸ್ಮಿಕವಾಗಿ ನಟನೆಗೆ ಬಂದೆ. ನಮ್ಮ ಪೋಷಕರಿಗೆ ನಟನೆ ಇಷ್ಟವಿರಲಿಲ್ಲ. ನಾನು ರೂಮಿನೊಳಗೆ ವಿಡಿಯೋ ಹಾಕಿಕೊಂಡು ಅಭ್ಯಾಸವನ್ನು ಮಾಡ್ತಾ ಇದ್ದೆ. ‘ಮನಸಾರೆ’ಯಲ್ಲಿ ಒಂದು ಫೈಟ್ ಸೀನ್ ಇತ್ತು. ನನ್ನ ಪಾಡಿಗೆ ನಾನು ಫೈಟ್ ಮಾಡಿದೆ. ಎಲ್ಲರೂ ಚಪ್ಪಾಳೆ ತಟ್ಟಿದರು. ಆಗ ತಮಾಷೆ ಮಾಡ್ತಾರೆ ಅಂತ ಅನ್ನಿಸಿತ್ತು. ಆದರೆ ಆ ದೃಶ್ಯ ಚೆನ್ನಾಗಿ ಬಂದಿತ್ತು ಎನ್ನುವುದು ಗೊತ್ತಾಯಿತು. ಡಾನ್ಸ್, ನಟನೆ, ಫೈಟ್ ಎಲ್ಲವನ್ನೂ ನಾನೇ ಸ್ವಯಂ ಅಭ್ಯಾಸದಿಂದ ಕಲಿತಿದ್ದೇನೆ. ಅದಕ್ಕಾಗಿ ಎಲ್ಲೂ ತರಬೇತಿ ತೆಗೆದುಕೊಳ್ಳಲಿಲ್ಲ. ನಿರಂತರವಾಗಿ ಅಭ್ಯಾಸವನ್ನು ಮಾಡುತ್ತಲೇ ರೂಢಿಸಿಕೊಂಡಿದ್ದೇನೆ. ಮುಂದೆ ಸ್ವಂತ ಉದ್ಯಮವನ್ನು ಆರಂಭಿಸುವ ಯೋಚನೆ ಕೂಡ ಇದೆ. ಈ ಹಿಂದೆ ಗೆಳೆಯರು ಸಿನಿಮಾ ಮಾಡುತ್ತಿದ್ದೆವು. ಆರೇಳು ತಿಂಗಳು ರಾಜಕೀಯ ದತ್ತಾಂಶ ಸಂಗ್ರಹಿಸಿ ಕಥೆಯನ್ನು ರೂಪಿಸಿದ್ದೆವು. ನಿರ್ಮಾಣಕ್ಕೆ ಸ್ನೇಹಿತರೇ ಹಣವನ್ನು ಹಾಕಿದ್ದೆವು. ಅದು ತುಂಬ ಚೆನ್ನಾಗಿದೆ ಎಂದು ನಮಗೆ ಅನಿಸಿತ್ತು. ಆರಂಭದಲ್ಲೇ ಕೊರೊನಾ ಬಂದು ತಡೆ ಹಾಕಿದೆ. ಎರಡು ತಿಂಗಳಲ್ಲಿ ಅದನ್ನು ಮುಂದವರಿಸುವ ಯೋಚನೆ ಇದೆ.

■ **ರಾಘವೇಂದ್ರ ಕೆ.**